ಸಿ.ಸಿ.1108/2023 ಡಿಡಬ್ಲ್ಯೂ-1

ದಿನಾಂಕಃ 15.04.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪಿರ್ಯಾದುದಾರರ ಪರ ಶ್ರೀ ಎನ್.ಎಸ್.ಜೆ. ವಕೀಲರಿಂದಃ**

ಪಿರ್ಯಾದಿ ಕಂಪನಿಯ ವ್ಯವಸ್ಥಾಪಕ ಪಾಲುದಾರರ ಪರಿಚಯ ನನಗಿದೆ. ಸದರಿ ವ್ಯಕ್ತಿಯು ಮತ್ತು ನಾನು ಒಂದೇ ಊರಿನವರು ಎಂದರೆ ಸರಿ. ಸದರಿ ವ್ಯಕ್ತಿಯು ಪ್ರಸ್ತುತವಾಗಿ ಮೃತರಾಗಿರುತ್ತಾರೆ ಎಂದರೆ ಸರಿ. ಪಿರ್ಯಾದಿ ಕಂಪನಿಯ ವ್ಯವಸ್ಥಾಪಕ ಪಾಲುದಾರರಾದ ನೋಬರ್ಟ್ ಸಾಲ್ಡಾನ ಬದುಕಿದ್ದ ಕಾಲದಲ್ಲಿ ಅವರು ಕಾಫೀ ವ್ಯವಹಾರವನ್ನು ಮಾಡುತ್ತಿದ್ದರು ಎಂದರೆ ಸರಿ. ಸದರಿ ವ್ಯಕ್ತಿಯ ಕಛೇರಿಯು ಮೂಡಿಗೆರೆಯ ಬಸ್ ನಿಲ್ದಾಣದ ಬಳಿ ಮತ್ತು ಅಂಚೆ ಕಛೇರಿಯ ಮುಂಭಾಗ ಇತ್ತು ಎಂದರೆ ಸರಿ. ಸದರಿಯವರಿಗೆ ಬೇಲೂರಿನಲ್ಲಿ ಕಾಫೀ ಕ್ಯೂರಿಂಗ್ ಸಂಸ್ಥೆ ಇರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿಯವರಿಗೆ ನಾನು ಕಾಫೀ ಬೆಳೆಯನ್ನು ಮಾರಾಟ ಮಾಡುತ್ತಿದ್ದೆ ಎಂದರೆ ಸರಿ. ಸದರಿಯವರು ಕಾಫೀ ವ್ಯವಹಾರದ ಬಾಬ್ತು ಲೆಕ್ಕಾಚಾರ ವಿವರಣೆಯನ್ನು ಮಾಡುತ್ತಿದ್ದರು ಎಂದರೆ ಸರಿ. ಸದರಿ ಕಾಫೀ ವ್ಯವಹಾರದ ಬಾಬ್ತು ನಾನು ನಿಪಿ-1 ನ್ನು ಸದರಿ ವ್ಯಕ್ತಿಗೆ ನೀಡಿರುತ್ತೇನೆ ಎಂದರೆ ಸರಿ. ನಾನು ಪಿರ್ಯಾದುದಾರರ ಕಂಪನಿಗೆ ನೀಡಬೇಕಾದ ರೂ.12,19,201/- ಹಣದ ಬಾಬ್ತು ದಿ.20.06.2023 ರಂದು ನಿಪಿ-1 ನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಚೆಕ್ ಅಮಾನ್ಯಗೊಂಡ ಬಗ್ಗೆ ಪಿರ್ಯಾದುದಾರರು ನೀಡಿದ ಸೂಚನಾವಳಿಗೆ ನಾನು ಯಾವುದೇ ಪ್ರತ್ಯುತ್ತರವನ್ನು ನೀಡಿರುವುದಿಲ್ಲ.

ಸಾಮಾನ್ಯವಾಗಿ ಬ್ಯಾಂಕ್ ನಿಂದ ನೀಡಿದ ಚೆಕ್ ನ ಮೇಲೆ ಮುದ್ರಣ ದಿನಾಂಕವನ್ನು ನಮೂದಿಸಲಾಗಿರುತ್ತದೆ ಎಂದರೆ ಸರಿ. ನಾನು ನಿಪಿ-1 ನ್ನು 25 ವರ್ಷದ ಹಿಂದೆ ನೀಡಿರುವುದಿಲ್ಲ, ಸದರಿ ನಿಪಿ-1 ನ್ನು ದಿ.20.06.2023 ರಂದು ಪಿರ್ಯಾದುದಾರರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಪಿರ್ಯಾದುದಾರರ ಪಾಲುದಾರ ಸಂಸ್ಥೆಗೆ ನೀಡಬೇಕಾದ ಹಣವನ್ನು ವಂಚಿಸುವ ಸಲುವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದು ವೇಳೆ ನಾನು ಪಿರ್ಯಾದು ಸಂಸ್ಥೆಗೆ ಹಣವನ್ನು ನೀಡುವ ಬಾದ್ಯತೆ ಇಲ್ಲದೇ ಇದ್ದ ಪಕ್ಷದಲ್ಲಿ ಸದರಿಯವರು ನೀಡಿದ ಸೂಚನಾವಳಿಗೆ ಪ್ರತ್ಯುತ್ತರವನ್ನು ನೀಡುತ್ತಿದ್ದೆ ಎಂದರೆ ಸಾಕ್ಷಿಯು ನಾನು ಯಾವುದೇ ಹಣವನ್ನು ನೀಡಬೇಕಾಗಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.,
ಮೂಡಿಗೆರೆ.